# ಅಧ್ಯಾಯ 6

# ನಿರ್ಣಯ ಮತ್ತು ಶಿಫಾರಸುಗಳು



# ಅಧ್ಯಾಯ 6

# ನಿರ್ಣಯ ಮತ್ತು ಶಿಫಾರಸುಗಳು

## ನಿರ್ಣಯ

### ಯೋಜನೆಯ ನಿರ್ವಹಣೆ

ಯೋಜನೆಯು ಇನ್ನೂ ಎಲ್ಲಾ ಯೋಜಿತ ವ್ಯವಹಾರ ಪ್ರಕ್ರಿಯೆಗಳನ್ನು ಕೆ2 ಅಪ್ಲಿಕೇಶನ್‌ಗೆ ಕಾರ್ಯಗತಗೊಳಿಸಿಲ್ಲ ಮತ್ತು ಇದರ ಪರಿಣಾಮವಾಗಿ ಹಲವಾರು ಪ್ರಕ್ರಿಯೆಗಳು ಇನ್ನೂ ಕೆ2 ಅಪ್ಲಿಕೇಶನ್ನಿನ ಹೊರಗೆ ಉಳಿದಿವೆ. ಆರ್ಥಿಕ ಕೈಪಿಡಿಗಳ ಪರಿಷ್ಕರಣೆಯಾಗದಿರುವುದು, ವ್ಯವಹಾರ ಪ್ರಕ್ರಿಯೆಯ ಮರು–ಪರಿಶೀಲನೆ ಇತ್ಯಾದಿಗಳನ್ನು ಕೈಗೊಳ್ಳದಿರುವುದಿರುವ ಕಾರಣಗಳಿಂದಾಗಿ ಮಾನವ ಹಸ್ತಚಾಲಿತ ಕಾರ್ಯಾಚರಣೆಗಳ ಮೇಲೆ ನಿರಂತರ ಅವಲಂಬನೆ ಮತ್ತು ಅಧೀನತೆಗೆ ಕಾರಣವಾಯಿತು. ಸಂಬಂಧಿತ ವ್ಯವಹಾರ ನಿಯಮಗಳನ್ನು ಈ ಅಪ್ಲಿಕೇಶನ್‌ನ ಭಾಗವಾಗಿ ಮಾಡದ ಕಾರಣ ಭಾರತೀಯ ಸರ್ಕಾರಿ ಲೆಕ್ಕಪತ್ರ ಮಾನದಂಡಗಳ ಅನುಷ್ಠಾನಕ್ಕೆ ಸಹಕರಿಸುವ ಸಾಮರ್ಥ್ಯವು ಸೀಮಿತವಾಗಿದೆ. ಅಪ್ಲಿಕೇಶನ್ ಅಭಿವೃದ್ಧಿಗಾಗಿ ನಿರ್ದಿಷ್ಟ ಮೈಲಿಗಲ್ಲುಗಳೊಂದಿಗೆ ವಾಟರ್‌ಫಾಲ್ ಮಾದರಿಯನ್ನು ಅಳವಡಿಸಿಕೊಂಡು ಎರಡು ಹಂತಗಳಲ್ಲಿ ಈ ಅಪ್ಲಿಕೇಶನ್ ಅಭಿವೃದ್ಧಿಪಡಿಸಲು ಮಾಸ್ಟರ್ ಸೇವಾ ಒಪ್ಪಂದವು ಮೂಲತಃ ಯೋಜಿಸಿತ್ತಾದರೂ ಯೋಜನೆಯು ಸಂಕಲ್ಪಿತ ಅಭಿವೃದ್ಧಿ ಮಾದರಿ ಮತ್ತು ವೇಳಾಪಟ್ಟಿಗಳಿಂದ ಸಂಪೂರ್ಣವಾಗಿ ಮಾರ್ಗಪಲ್ಲಟಗೊಂಡ ಕಾರಣ ಗುತ್ತಿಗೆಯು ಅನಗತ್ಯವಾಗುವಲ್ಲಿ ಪರಿಣಮಿಸಿತು. ಯೋಜನೆಯನ್ನು ಗುತ್ತಿಗೆದಾರರ ಹಿಡಿತದ ಸನ್ನಿವೇಶದಿಂದ ರಕ್ಷಿಸಲು ಇಲಾಖೆಯು ವಿಫಲವಾದ ಕಾರಣ, ತಾಂತ್ರಿಕ ಸಂಯೋಜಕರು ಹೇರಿದ ನಿಯಮಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ, ಕಾರ್ಯಾಚರಣೆ ಮತ್ತು ನಿರ್ವಹಣೆ ಒಪ್ಪಂದವನ್ನು ಮತ್ತಷ್ಟು ವಿಸ್ತರಿಸಲಾಯಿತು. ಮಾಡ್ಯೂಲ್‌ಗಳ ಅಭಿವೃದ್ಧಿ ಮತ್ತು ಕಾರ್ಯಾರಂಭದ ವಿಳಂಬವನ್ನು ಪರಿಗಣಿಸದೆಯೇ ಕಾರ್ಯಾಚರಣೆ ಮತ್ತು ನಿರ್ವಹಣೆ ಒಪ್ಪಂದವನ್ನು ವಿಸ್ತರಿಸಲಾಯಿತು. ಮಾಸ್ಟರ್ ಸೇವಾ ಒಪ್ಪಂದದ ಮೇಲ್ವಿಚಾರಣಾ ಪರಿಕರಗಳ ನಿಯೋಜನೆಯು ಒಂದು ತಂತ್ರಜ್ಞಾನ ಯೋಜನೆಯ ಪ್ರಮುಖ ಅಂಶವಾಗಿದ್ದರೂ, ಗುತ್ತಿಗೆದಾರರು ಇನ್ನೂ ಆ ಪರಿಕರಗಳನ್ನು ನಿಯೋಜಿಸಿರಲಿಲ್ಲ. ಹೀಗಾಗಿ, ತಾಂತ್ರಿಕ ಸಂಯೋಜಕರು ಒದಗಿಸಿದ ಸೇವೆಯ ಗುಣಮಟ್ಟವನ್ನು ಅಳೆಯಲಾಗುವುದಿಲ್ಲ. ಸಮಯದ ವಿಸ್ತರಣೆ ಸರಿದೂಗಿಸುವುದಕ್ಕೆ ಅನುಗುಣವಾಗಿ ಒಪ್ಪಂದವನ್ನು ಪರಿಷ್ಕರಿಸಲಾಗಿಲ್ಲ. ಇಲಾಖೆಯು ಯೋಜನೆಯನ್ನು ಮೂರನೇ ವ್ಯಕ್ತಿಯ ಪರಿಶೋಧನೆ ಮತ್ತು ಪರೀಕ್ಷೆಗೆ ಒಳಪಡಿಸದೆಯೇ ನಿಯೋಜಿಸಿದೆ.

### ಯೋಜನೆಯ ಅನುಷ್ಠಾನ

ವೆಚ್ಚದ ಜಾಡು ಹಿಡಿಯುವ ಮಾಡ್ಯೂಲ್ ಕಾರ್ಯಾರಂಭ ಮಾಡದ ಕಾರಣ ಕಾಲಾಂತರದ ವೆಚ್ಚದ ಜಾಡನ್ನು ಹಿಡಿಯುವ ಸಾಮರ್ಥ್ಯವನ್ನು ಪ್ರದರ್ಶಿಸಲು ಕೆ2ವಿಗೆ ಇನ್ನೂ ಸಾಧ್ಯವಾಗಿಲ್ಲ. ಬಳಕೆ

ಪ್ರಮಾಣಪತ್ರಗಳಿಗೆ ಅವಕಾಶ ಕಲ್ಪಿಸದ ಕಾರಣ ಸಹಾಯಾನುದಾನದ ಬಿಲ್‌ಗಳ ಮತ್ತು ಸ್ವೀಕರ್ತನ ರಸೀದಿ ಬಿಲ್‌ಗಳ ಮೇಲೆ ಸೆಳೆಯಲಾದ ಹಣದ ಜಾಡನ್ನು ಹಿಡಿಯಲು ಸಾಧ್ಯವಾಗುವುದಿಲ್ಲ. ಮೂಲ ಒಪ್ಪಂದದಲ್ಲಿ ನಿಗದಿ ಪಡಿಸಿದ ಗೋ–ಲೈವ್ ದಿನಾಂಕಗಳು ಮತ್ತು ವಿತರಣಾ ನಿರೀಕ್ಷೆಗಳನ್ನು ಸಾಕಷ್ಟು ಬದಲಾಯಿಸಲಾಯಿತು ಮತ್ತು ಯೋಜನೆಯನ್ನು ಪೂರ್ಣಗೊಳಿಸಲು ಅಗತ್ಯವಿರುವ ಸಮಯ ಮತ್ತು ವೆಚ್ಚವನ್ನು ಇಲಾಖೆ ನಿಗದಿ ಮಾಡಲಿಲ್ಲ. ಎಮ್‌ಐಎಸ್ ವರದಿಗಳ ತಯಾರಿಕೆಯಲ್ಲಿನ ದೋಷಗಳು, ಸಾಕಷ್ಟಿರದ ಅಪ್ಲಿಕೇಶನ್ ನಿಯಂತ್ರಣಗಳಿಂದ ಉಂಟಾಗುವ ಇನ್‌ಪುಟ್ ದೋಷಗಳು ಇತ್ಯಾದಿಗಳನ್ನು ಸಹಾ ಗಮನಿಸಲಾಯಿತು. ಹಲವಾರು ಯೋಜಿತ ಪ್ರಕ್ರಿಯೆಗಳು ಇನ್ನೂ ಕಾರ್ಯಾರಂಭ ಮಾಡದೇ ಇರುವುದರಿಂದ ನಿಯೋಜಿಸಲಾದ ಮಾಡ್ಯೂಲ್‌ಗಳು ಅಪೂರ್ಣವಾಗಿದ್ದವು.

ಅನುಷ್ಠಾನದಲ್ಲಿನ ದೀರ್ಘ ವಿಳಂಬವು ಕೆ1ನ ಸಮಾನಾಂತರ ಕಾರ್ಯಾಚರಣೆ ಮುಂದುವರೆಸುವ ಅಗತ್ಯವನ್ನು ಉಂಟುಮಾಡಿತ್ತು, ಇದರ ಪರಿಣಾಮವಾಗಿ ಯಾವುದೇ ಪರಸ್ಪರ ಸಂಪರ್ಕವಿಲ್ಲದ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಹಣಕಾಸಿನ ದತ್ತಾಂಶವನ್ನು ಗ್ರಹಿಸಲು ಕಾರಣವಾಯಿತು ಹಾಗಾಗಿ, ಉನ್ನತ ನಿರ್ವಹಣಾ ತಂಡಕ್ಕೆ ತಮ್ಮ ನಿರ್ಧಾರವನ್ನು ಬೆಂಬಲಿಸಲು ಸಮಗ್ರ ಹಣಕಾಸಿನ ಮಾಹಿತಿಯನ್ನು ಒದಗಿಸುವಲ್ಲಿ ಕೆ2ವಿನ ಸಾಮರ್ಥ್ಯವನ್ನು ಸೀಮಿತಗೊಳಿಸಿದಂತಾಗಿದೆ. ಅಪ್ಲಿಕೇಶನ್ ತನ್ನ ವರದಿಗಳಲ್ಲಿ ಅಸಮಂಜಸವಾದ ಮಾಹಿತಿಯನ್ನು ಉತ್ಪಾದಿಸುವ ನಿದರ್ಶನಗಳನ್ನು ಗಮನಿಸಲಾದ ಕಾರಣ ಅಂತಿಮ ಫಲಿತಾಂಶಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಾರ್ಹಗೊಳಿಸಿದೆ.

### ಯೋಜನೆಯ ಭದ್ರತೆ

ಅಪ್ಲಿಕೇಶನ್‌ನಲ್ಲಿ ಗಮನಿಸಲಾದ ಭದ್ರತಾ ದುರ್ಬಲತೆಗಳು ಸೂಕ್ಷ್ಮ ಆರ್ಥಿಕ ಮಾಹಿತಿಯನ್ನು ಸಂಬಂಧಿಸಿರದ ಜನರು ಪಡೆಯುವ ಮತ್ತು ದುರುಪಯೋಗಕ್ಕೆ ಒಡ್ಡುವ ಸಾಮರ್ಥ್ಯವನ್ನು ಹೊಂದಿವೆ ಮತ್ತು ಹಾಗಾಗಿ, ಮಾಹಿತಿಯ ಗೌಪ್ಯತೆ ಮತ್ತು ಸಮಗ್ರತೆಯೊಂದಿಗೆ ರಾಜಿ ಮಾಡಿಕೊಳ್ಳುವ ಅಪಾಯವನ್ನು ಎದುರಿಸುತ್ತವೆ. ಯೋಜನೆಯು ತನ್ನ. ಲಿಪೀಕರಣ ಮತ್ತು ಡಿಜಿಟಲ್ ಸಹಿಯೊಂದಿಗೆ ಆನ್‌ಲೈನ್ ದತ್ತಾಂಶ ವಿನಿಮಯವನ್ನು ಪರಿಚಯಿಸಲಾಗಿದ್ದರೂ, ನಿರಾಕರಣೆ ತಪ್ಪಿಸುವ ಕಾರ್ಯವಿಧಾನಗಳು ಜಾರಿಯಲ್ಲಿಲ್ಲ. ಮಂಜೂರಾತಿ ಆದೇಶದ ಮಾಹಿತಿ ಮತ್ತು ಉಪ–ವೋಚರ್ ಮಾಹಿತಿಯ ಅನುಪಸ್ಥಿತಿಯ ಜೊತೆಗೆ ದೋಷಪೂರ್ಣ ಡಿಎಸ್‌ಸಿ ಅನುಷ್ಠಾನದಿಂದಾಗಿ ಕೆ2ವಿನ ಅಡಿಯಲ್ಲಿ ರಚಿಸಲಾದ ವೋಚರ್‌ಗಳನ್ನು ಅಪೂರ್ಣಗೊಳಿಸಿದಂತಾಗಿದೆ ಮತ್ತು ವೋಚರ್‌ಗಳ ಮಾನವಚಾಲಿತ ರವಾನೆಯನ್ನು ಬದಲಿಸಲು ಸಾಕಷ್ಟಿರದಂತಾಗಿದೆ. ಯೋಜನೆಯಲ್ಲಿ ಮಾನವದ್ವೈಹಿಕ ಕಾರ್ಯನಿರ್ವಹಣೆ ಮತ್ತು ಬ್ಯಾಕ್ ಎಂಡ್ ನಿಂದ ಮಾಹಿತಿ ಒಳಸೇರಿಸುವುದನ್ನು ಮುಂದುವರೆಸಿದ ಕಾರಣ ಅಪ್ಲಿಕೇಶನ್ ಅನ್ನು ದತ್ತಾಂಶದ ಸಮಗ್ರತೆ ಮತ್ತು ವಿಶ್ವಾಸಾರ್ಹತೆ ಸಂಬಂಧಿತ ಅಪಾಯಗಳಿಗೆ ಒಡ್ಡಿದಂತಾಗಿದೆ. ಬಿಲ್‌ಗಳ ಪ್ರಕ್ರಿಯೆ, ವಿಫಲ ಪಾವತಿಗಳ ಮರುಸಂಸ್ಕರಣೆ, ಇತ್ಯಾದಿಗಳಿಗೆ ಸಮಯದ ನಿಗದಿ ಮಾಡಿಲ್ಲದಿರುವುದು, ಅಪ್ಲಿಕೇಶನ್ ಸಿಸ್ಟಮ್‌ನ ದಕ್ಷತೆಯ ಮೇಲೆ ಪರಿಣಾಮ ಬೀರಿತು.

### ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಮರುವಿನಿಯೋಗಗಳು, ನಿಧಿಗಳ ಅಧ್ಯರ್ಪಣೆ ಇತ್ಯಾದಿಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಹಸ್ತಚಾಲಿತ ಕ್ರಿಯೆಗಳ ಮೂಲಕ ನಿರ್ವಹಿಸುವುದರಿಂದ ಆಯವ್ಯಯ ಸಂಪನ್ಮೂಲಗಳ ಸಮರ್ಥ ಹಂಚಿಕೆ ಮತ್ತು ಅವುಗಳ ಮೇಲ್ವಿಚಾರಣೆಯು ಬಾಧಿತಗೊಂಡಿತು. ಸಾರ್ವಜನಿಕ ನಿಧಿಯಿಂದ ಸೆಳೆಯಲಾದ ಹಣ ಮತ್ತು ಅದರ ಅಂತಿಮ ಬಳಕೆಯ ಬಗ್ಗೆ ಆರಂಭದಿಂದ ಅಂತ್ಯದವರೆಗೂ ಮೇಲ್ವಿಚಾರಣೆ ಮಾಡಲು ಕೆ2

ಸಮರ್ಥವಾಗಿಲ್ಲ. ಬಿಲ್‌ಗಳ ಮೂಲಕ ಮುಂಗಡಗಳ ಸ್ವರೂಪದಲ್ಲಿ ಸೆಳೆಯಲಾದ ಹಣಕ್ಕೆ ಅಂತಿಮ ವೆಚ್ಚದ ವಿವರಗಳನ್ನು ಸಲ್ಲಿಸುವಲ್ಲಿ ನ್ಯೂನತೆಗಳಿದ್ದವು. ಪಾವತಿಗಳನ್ನು ಹಲವು ಬಾರಿ ಪ್ರಕ್ರಿಯೆಗೊಳಿಸುವುದು, ಪಾವತಿಗಳನ್ನು ಲೆಕ್ಕದಲ್ಲಿ ಸೇರಿಸದಿರುವುದು ಮುಂತಾದ ಪ್ರಕರಣಗಳನ್ನು ಗಮನಿಸಲಾಯಿತು, ಇದು ಸಮನ್ವಯ ಕಾರ್ಯವಿಧಾನ ಸಾಕಷ್ಟಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಯೋಜನೆಯ ಕಾರ್ಯಚಟುವಟಿಕೆಗಳಿಗೆ ಬಳಸಿಕೊಳ್ಳಲಾದ ಮಾಸ್ಟರ್ ದತ್ತಾಂಶವನ್ನು ಸಂಪೂರ್ಣವಾಗಿ ದಾಖಲಿಸಲಾಗಿರಲಿಲ್ಲ ಮತ್ತು ಇಂದೀಕರಿಸಲಾಗಿರಲಿಲ್ಲ. ಯೋಜನೆಯ ಅನುಷ್ಠಾನದ ನಿರ್ಣಾಯಕ ಅವಧಿಯಲ್ಲಿ ಅಧಿಕಾರಸ್ಥ ಸಮಿತಿಯು ಯೋಜನೆಯ ನಿಯತಕಾಲಿಕ ಪರಿಶೀಲನೆ ಕೈಗೊಳ್ಳದಿರುವುದರಿಂದಾಗಿ ಸರ್ಕಾರದ ಮಟ್ಟದಲ್ಲಿ ಯೋಜನೆಯ ಮೇಲ್ವಿಚಾರಣೆಯು ಬಲಹೀನವಾಗಿತ್ತು.

ಹೀಗಾಗಿ, ಕೆ1ಗಿಂತ ಹೆಚ್ಚಿನ ಸುಧಾರಣೆಯ ಮಹತ್ವಾಕಾಂಕ್ಷೆಯ ಉದ್ದೇಶಗಳೊಂದಿಗೆ ಪ್ರಸ್ತಾಪಿಸಲ್ಪಟ್ಟ ಕೆ2 ಯೋಜನೆಯನ್ನು ಇನ್ನೂ ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗಿಲ್ಲ ಮತ್ತು ನಿಯೋಜಿಸಲಾಗಿಲ್ಲ. ಯೋಜಿಸಿದ 10 ವರ್ಷಗಳ ನಂತರವೂ, ಕೆ2 ಅನುಷ್ಠಾನವು, ಇಲಾಖೆಗೆ ನಿರಂತರ ಸವಾಲಿನ ಕಾರ್ಯಚಟುವಟಿಕೆಯಾಗಿ ಮುಂದುವರೆದಿದೆ. ಅಪ್ಲಿಕೇಶನ್, ಸರ್ಕಾರದ ಆರ್ಥಿಕ ವಲಯದ ವಿವಿಧ ಕಾರ್ಯಚಟುವಟಿಕೆಗಳನ್ನು ಬೆಂಬಲಿಸುವ ಸಾಮರ್ಥ್ಯ ಹೊಂದಿದ ಒಂದು ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆಯಾಗಿ ಇನ್ನೂ ರೂಪುಗೊಂಡಿಲ್ಲ.

## ಶಿಫಾರಸುಗಳು

ಈ ಕೆಳಗಿನ ಶಿಫಾರಸುಗಳನ್ನು ಮಾಡಲಾಗಿದೆ:

### *ರಾಜ್ಯ ಸರ್ಕಾರ :*

- *ಕೆ2 ಅಪ್ಲಿಕೇಶನ್ ಮೂಲಕ ತರಲಾಗಿರುವ ಆರ್ಥಿಕ ಸಂಸ್ಕರಣಾ ಪದ್ಧತಿಗಳಲ್ಲಿನ ಬದಲಾವಣೆಗಳನ್ನು ಪ್ರದರ್ಶಿಸಲು ಮತ್ತು ವೋಚರ್‌ಗಳ ವಿದ್ಯುನ್ಮಾನ ಪ್ರಸರಣವನ್ನು ಸುಲಭಗೊಳಿಸಲು ಸರ್ಕಾರವು ಹಣಕಾಸು ಕೈಪಿಡಿಗಳ ಪರಿಷ್ಕರಣೆಯನ್ನು ತ್ವರಿತಗೊಳಿಸಬೇಕು.*

- *ಭಾರತೀಯ ಸರ್ಕಾರಿ ಲೆಕ್ಕಪತ್ರ ವ್ಯವಸ್ಥೆಯ ಅನುಸರಣೆಗೆ ಅನುಕೂಲವಾಗುವಂತೆ ಕೆ2 ಸೂಕ್ತವಾದ ಭಾರತೀಯ ಸರ್ಕಾರಿ ಲೆಕ್ಕಪತ್ರ ವ್ಯವಸ್ಥೆಯ ಕಾರ್ಯನಿರ್ವಹಣೆಗಳನ್ನು ಒದಗಿಸುತ್ತದೆ ಎಂದು ಸರ್ಕಾರವು ಖಚಿತಪಡಿಸಿಕೊಳ್ಳಬಹುದಾಗಿದೆ.*

- *ಕೆ2 ಒಪ್ಪಂದದ ನಿರ್ವಹಣೆಯ ವೈಫಲ್ಯಗಳಿಂದ ಅರಿತ ಅಂಶಗಳನ್ನು ಸಂಯೋಜಿಸುವ ಮೂಲಕ ಸರ್ಕಾರವು ಸಾಫ್ಟ್‌ವೇರ್ ಅಭಿವೃದ್ಧಿ ಯೋಜನೆಗಳಿಗೆ ಸೂಕ್ತ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಬಹುದಾಗಿದೆ.*

- *ಕಾನ್ಫಿಗರೇಷನ್ ನಿರ್ವಹಣೆ, ಕಾರ್ಯತಂತ್ರದ ನಿಯಂತ್ರಣ, ಗುರುತಿನ ನಿರ್ವಹಣೆ, ಸೋರ್ಸ್ ಕೋಡ್ ಮಾಲೀಕತ್ವ ಇತ್ಯಾದಿಗಳಿಗೆ ಸಂಬಂಧಿಸಿದ ಅತ್ಯುತ್ತಮ ಪದ್ಧತಿಗಳನ್ನು ಸರ್ಕಾರವು ಅಳವಡಿಸಿಕೊಳ್ಳಬಹುದಾಗಿದೆ.*

- *ನಿರೀಕ್ಷಿತ ಪ್ರಯೋಜನಗಳನ್ನು ಪಡೆಯಲು ಇ–ಸಂಗ್ರಹಣೆ, ಹೆಚ್‌ಆರ್‌ಎಮ್‌ಎಸ್ ಮುಂತಾದ ಪ್ರಮುಖ ಅಪ್ಲಿಕೇಶನ್‌ಗಳೊಂದಿಗೆ ಏಕೀಕರಣ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು.*

- ಸೂಕ್ತ ಯೋಜನಾ ವಿತರಣೆಗಳು ಮತ್ತು ಪರಸ್ಪರ ಅಂಗೀಕಾರವನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಸಾಫ್ಟ್‌ವೇರ್ ಅಭಿವೃದ್ಧಿ ಯೋಜನೆಗಳಿಗೆ ಸಮರ್ಪಕ ಕಾರ್ಯವಿಧಾನಗಳನ್ನು ನಿಗದಿಪಡಿಬೇಕು.

- ನಿಯತಕಾಲಿಕವಾಗಿ ಭದ್ರತೆ ಮತ್ತು ಅಪ್ಲಿಕೇಶನ್ ಕಾರ್ಯಕ್ಷಮತೆಯ ಲೆಕ್ಕಪರಿಶೋಧನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರವು ಭಾರತ ಸರ್ಕಾರದ ಮಾರ್ಗಸೂಚಿಗಳನ್ನು ನಿರ್ದಿಷ್ಟಪಡಿಸಬಹುದು/ ಅಳವಡಿಸಬಹುದಾಗಿದೆ.

### *ಯೋಜನಾ ನಿರ್ದೇಶಕರು:*

- 2024ರ ವೇಳೆಗೆ ಕೆ2ವನ್ನು ಗುತ್ತಿಗೆದಾರರ ಹೊರತಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಅದರ ಸಿದ್ಧತೆಯನ್ನು ನಿರ್ಣಯಿಸಲು ನಿರ್ಗಮನ ನಿರ್ವಹಣಾ ಯೋಜನೆಯೊಂದನ್ನು ಕೆ2 ಅಂತಿಮಗೊಳಿಸಬೇಕು ಮತ್ತು ಪರೀಕ್ಷಿಸಬೇಕು. ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ ಮುಗಿದ ನಂತರ ಸ್ವತಂತ್ರವಾಗಿ ಬದಲಿ ಪಾಲುದಾರನನ್ನು ಆಯ್ಕೆ ಮಾಡುವ ಸಾಮರ್ಥ್ಯದ ಬಗೆಗೆ ಅದರ ಸ್ಥಿತಿಯನ್ನು ಪರಿಶೀಲಿಸಬೇಕು ಮತ್ತು 2024ರಲ್ಲಿ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿಯ ವಿಸ್ತರಣೆಯ ಸಮಯದಲ್ಲಿ ಅದರ ಕಾರ್ಯತಂತ್ರದ ಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು ಅವಲಂಬನೆಯ ಯಾವುದೇ ಸಂದೇಹಗಳನ್ನು ಪರಿಹರಿಸಬೇಕು.

- ಸಮಗ್ರ ದತ್ತಸಂಚಯವನ್ನು ಹೊಂದಲು ಅನುವಾಗುಂತೆ ನಿಗದಿತ ವೇಳಾಪಟ್ಟಿಗೆ ಅನುಗುಣವಾಗಿ ಕೆ1ನಿಂದ ಕೆ2ವಿಗೆ ದತ್ತಾಂಶದ ವರ್ಗಾವಣೆ ಕೈಗೊಳ್ಳಬೇಕು.

- ಸ್ವೀಕರಿಸಿದ ದೂರುಗಳ ಸಕಾಲಿಕ ಮತ್ತು ಪರಿಣಾಮಕಾರಿ ಪರಿಹಾರವನ್ನು ಮೇಲ್ವಿಚಾರಣೆ ಮಾಡಲು ಪ್ರತಿಕ್ರಿಯೆ ಮತ್ತು ತೀರುವಳಿ ಕಾರ್ಯವಿಧಾನವನ್ನು ಸ್ಥಾಪಿಸಬೇಕು.

- ಕಾಲಾಂತರದಲ್ಲಿ ದಾಖಲಿಸಿರುವ ದತ್ತಾಂಶದ ಬಲದಿಂದ ಕೆ2 ಟ್ರೆಂಡ್ ವಿಶ್ಲೇಷಣೆ ಮತ್ತು ವಾಸ್ತವಾಂಶ ವರದಿಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಯಚಟುವಟಿಕೆಗಳನ್ನು ನಿರ್ಮಿಸಬಹುದಾಗಿದೆ.

- ವಿಫಲವಾದ ಪಾವತಿಗಳ ಮರುಸಂಸ್ಕರಣೆಯ ಸ್ಥಿತಿಯನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡಲು ಡಿಡಿಒಗಳಿಗೆ ವರದಿಯೊಂದನ್ನು ಒದಗಿಸಬಹುದಾಗಿದೆ. ವಿಫಲವಾದ ಪಾವತಿ ಬಿಲ್‌ಗಳ ಮರುಸಂಸ್ಕರಣೆಗಾಗಿ ವೇಳಾಪಟ್ಟಿಯನ್ನು ಸಹ ಸೂಚಿಸಬಹುದಾಗಿದೆ.

- ಕೆ2 ಯೋಜನೆಯ ಅನುಷ್ಠಾನದಲ್ಲಿ ಬಳಸಲು ಅಧಿಕೃತ ದಾಖಲೆಯಾಗಿ ಕಾರ್ಯನಿರ್ವಹಿಸಲು ನೀತಿಗಳು/ಮಾರ್ಗಸೂಚಿಗಳನ್ನು ಅನುಮೋದಿಸಬೇಕಾಗಿದೆ.

- ಕೆ2 ಮೂಲಸೌಕರ್ಯದ ಎಲ್ಲಾ ಘಟಕಗಳನ್ನು ಒಳಗೊಂಡ ಭದ್ರತಾ ಪರಿಶೋಧನೆಯನ್ನು ಆದ್ಯತೆಯ ಆಧಾರದ ಮೇಲೆ ಕೈಗೊಳ್ಳಬಹುದಾಗಿದೆ. ಇಂದೀಕರಿಸಲಾದ ಅಪ್ಲಿಕೇಶನ್‌ಗಳನ್ನು ಪರಿಶೋಧನೆಯ ನಂತರ ಮಾತ್ರವೇ ಉತ್ಪಾದನಾ ಪರಿಸರಕ್ಕೆ ಬಿಡುಗಡೆ ಮಾಡಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಂತಹ ಲೆಕ್ಕಪರಿಶೋಧನೆಗಳನ್ನು ನವೀನ/ತಿದ್ದುಪಡಿಗೊಳಿಸಿದ ಕಾರ್ಯಚಟುವಟಿಕೆಗಳಿಗೂ ಅನ್ವಯವಾಗುವಂತೆ ಮಾಡಬೇಕು.

- ಬದಲಾಗುತ್ತಿರುವ ತಂತ್ರಜ್ಞಾನದೊಂದಿಗೆ ವಿಕಸನಗೊಳ್ಳುವ ಯೋಜನೆಯ ದಿಕ್ಕನ್ನು ಪ್ರದರ್ಶಿಸಲು ಮತ್ತು ದಾಖಲಿಸಲು ಕಾರ್ಯತಂತ್ರದ ಯೋಜನೆಯನ್ನು ಸಿದ್ಧಪಡಿಸುವುದನ್ನು ಕೆ2 ಪರಿಗಣಿಸಬಹುದಾಗಿದೆ.

- *ಅಪ್ಲಿಕೇಶನ್ ಅನುಷ್ಠಾನದ ಮೇಲೆ ಉದ್ದೇಶಿತ ಮಟ್ಟದ ನಿಯಂತ್ರಣವನ್ನು ಪಡೆಯಲು ಅಪ್ಲಿಕೇಶನ್, ದತ್ತಸಂಚಯವನ್ನು ಮತ್ತು ಭದ್ರತೆಯನ್ನು ಒಳಗೊಂಡಿರುವ ಪರಿಣಿತರ ತಂಡವನ್ನು ಕೆ2 ಸ್ಥಾಪಿಸಬಹುದಾಗಿದೆ.*

- *ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯನ್ನು ಮೇಲ್ವಿಚಾರಣೆ ಮಾಡಲು ಕಾರ್ಯಚಟುವಟಿಕೆಗಳನ್ನು ಒದಗಿಸುವ ಮೂಲಕ ಅನುದಾನದ ಸಕಾಲಿಕ ಮತ್ತು ಪರಿಣಾಮಕಾರಿ ಬಳಕೆಯನ್ನು ಮೇಲ್ವಿಚಾರಣೆ ಮಾಡಲು ಕೆ2 ಸೂಕ್ತ ಕಾರ್ಯಚಟುವಟಿಕೆಗಳನ್ನು ಒದಗಿಸಬಹುದಾಗಿದೆ.*

**ಬೆಂಗಳೂರು** — **(ಎಸ್. ಶಾಂತಿ ಪ್ರಿಯ)**

**ದಿನಾಂಕ 18 ಮಾರ್ಚ್ 2022** — **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–1), ಕರ್ನಾಟಕ**

**ಮೇಲುಸಹಿ ಮಾಡಲಾಗಿದೆ**

**ನವದೆಹಲಿ** — **(ಗಿರೀಶ್ ಚಂದ್ರ ಮುರ್ಮು)**

**ದಿನಾಂಕ 21 ಮಾರ್ಚ್ 2022** — **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**